# ಗೋಪಾಲದಾಸರು

ಡಾ. ಅಕ್ಕಮಹಾದೇವಿ

ಹರಿದಾಸ ಪರಂಪರೆಯ ಮೂಲಸ್ತಂಭಗಳೆಂದು ಪ್ರಶಂಸೆ ಪಡೆದ ಮಹನೀಯರಲ್ಲಿ ಗೋಪಾಲದಾಸರೂ ಒಬ್ಬರು. ಪ್ರಥಮಘಟ್ಟದಲ್ಲಿ ದಾಸಸಾಹಿತ್ಯವನ್ನು ಜನಪ್ರಿಯಗೊಳಿಸಿದವರು ಪುರಂದರದಾಸರು ಮತ್ತು ಕನಕದಾಸರಾದರೆ, ದ್ವಿತೀಯ ಘಟ್ಟದಲ್ಲಿ ವಿಜಯದಾಸರು, ಗೋಪಾಲದಾಸರು ಮತ್ತು ಜಗನ್ನಾಥದಾಸರನ್ನು ಹೆಸರಿಸಬೇಕು. ಗೋಪಾಲದಾಸರ ಮೊದಲ ಹೆಸರು ಭಾಗಣ್ಣ. 'ಭಕ್ತಿಯಲ್ಲಿ ಭಾಗಣ್ಣ' ಎಂದು ಪ್ರಸಿದ್ಧಿ ಪಡೆದ ಗೋಪಾಲದಾಸರ ಜೀವನದ ಬಗ್ಗೆ ತಿಳಿದುಕೊಳ್ಳಲು ಹೆಚ್ಚಿನ ಆಧಾರಗಳಿಲ್ಲ. ಗೋಪಾಲದಾಸರ ತಮ್ಮ ರಂಗನಾಥರು ಬರೆದ 'ಗೋಪಾಲ ವಿಠಲರ ಚರಿತ್ರೆ ಪದ' ವೊಂದೇ ನಂಬಲರ್ಹ ಆಧಾರವಾಗಿದೆ. ಗೋಪಾಲದಾಸರ ರಚನೆಗಳಿಂದ ಕೂಡ ಕೆಲವು ವಿಷಯಗಳು ತಿಳಿದು ಬರುತ್ತವೆ. ಇವುಗಳ ಜೊತೆಗೆ ಗೋಪಾಲದಾಸರ ಬಗ್ಗೆ ಜನಜನಿತವಾಗಿ ಬಂದಿರುವ ಕಥೆಗಳನ್ನು ಕೂಡ ಪರಿಶೀಲಿಸ ಬಹುದು.

ಗೋಪಾಲದಾಸರು ಸುಮಾರು ಕ್ರಿ.ಶ. ೧೭೨೧ ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಸರುಕಲ್ಲಿನಲ್ಲಿ ಜನಿಸಿದರು. ಇವರ ತಂದೆ ಮುರಾರಿ, ತಾಯಿ ವೆಂಕಮ್ಮ, ತಾತ ಮುದ್ಗಲಪ್ಪ. ಭಾಗಣ್ಣನೇ ಹಿರಿಯ. ಇವರಿಗೆ ದಾಸಪ್ಪ, ಸೀನಪ್ಪ, ರಂಗಪ್ಪ ಎಂಬ ಮೂವರು ತಮ್ಮಂದಿರು. ಇವರೂ ದಾಸಕೂಟಕ್ಕೆ ಸೇರಿದವರೇ. ಇವರದು ಸಾಮಾನ್ಯ ವಾದ ರೈತ ಕುಟುಂಬ. ಇವರ ಪೂರ್ವಜರು ಪುರಾಣ ಶಾಸ್ತ್ರ ಪಾರಂಗತರಲ್ಲ. ತಂದೆ ಮುರಾರಿಯ ಮರಣಾನಂತರ ತಾಯಿ ವೆಂಕಮ್ಮ ಮಕ್ಕಳನ್ನು ಸಂಕಾಪುರಕ್ಕೆ ಕರೆತಂದಳು. ಬಹಳ ಕಷ್ಟಪಟ್ಟು ಮಕ್ಕಳಿಗೆ ವಿದ್ಯೆ ಕಲಿಸಿದಳು. ಏಳು ವರ್ಷಗಳ ಬಳಿಕ ಉತ್ತನೂರಿಗೆ ಅವರೆಲ್ಲ ಬಂದರು.

ಭಾಗಣ್ಣ ದೊಡ್ಡವನಾದ ಬಳಿಕ ಉತ್ತನೂರಿನ ವೆಂಕಟೇಶ್ವರನ ಸನ್ನಿಧಿಯಲ್ಲಿದ್ದು 'ವೆಂಕಟಕೃಷ್ಣ' ಅಂಕಿತದಿಂದ ಕೀರ್ತನೆಗಳನ್ನು ರಚಿಸಲಾರಂಭಿಸಿದ. **'ಸಂಕಟಗಳನಟ್ಟಿ ದಾರಿಗೆ ವೆಂಕಟಕೃಷ್ಣನು ನೀನೆ ವಿಜಯವಿಠಲಯೆಂದು ಅಂಕುರವು ಪಲ್ಲೈಸಿ ಫಲಪ್ರಾಪ್ತಿ ಯಾಗಲೊ'** ಎಂಬ ವಿಜಯದಾಸರ ಮಾತುಗಳಿಂದ ಹಾಗೂ ರಂಗಪ್ಪದಾಸರ **'ವೆಂಕಪ್ಪಕೃಷ್ಣೆಂದು ಪದಗಳಿಗಂಕಿತವು ನೀಡುತಿರೆ'** ಎಂಬ ಮಾತುಗಳಿಂದ ಭಾಗಣ್ಣನು 'ವೆಂಕಟಕೃಷ್ಣ' ಎಂಬ ಮುದ್ರಿಕೆ ಯಿಂದ ದೇವರನಾಮಗಳನ್ನು ರಚಿಸುತ್ತಿದ್ದ ವಿಷಯ ಸ್ಪಷ್ಟವಾಗುತ್ತದೆ. ಆದರೆ ಆ ಅಂಕಿತದಲ್ಲಿ ಕೀರ್ತನೆಗಳು ದೊರೆತಂತಿಲ್ಲ.

ಲೇಖಕಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕಿಯಾಗಿದ್ದಾರೆ; ದಾಸಸಾಹಿತ್ಯದಲ್ಲಿ ಪರಿಣತರು.

ವಿಜಯದಾಸರ ದರ್ಶನವಾದ ಬಳಿಕ ಭಾಗಣ್ಣನ ಜೀವನದಲ್ಲಿ ಮಹತ್ವದ ಬದಲಾವಣೆ ಉಂಟಾಯಿತು. ಅವರಿಂದ ದೀಕ್ಷೆಯನ್ನು ಸ್ವೀಕರಿಸಿ, **'ಗೋಪಾಲ ವಿಠಲ'** ಎಂಬ ಅಂಕಿತ ಪಡೆದ ಭಾಗಣ್ಣನೇ ನಂತರ ಗೋಪಾಲದಾಸರಾದರು. ಅಂಕಿತಪ್ರದಾನವಾದ ವರ್ಷದ ಬಗ್ಗೆ ಚಿಪ್ಪಗಿರಿಯ ಹಳೆಯ ವಹಿಯೊಂದರಲ್ಲಿ ದಾಖಲೆ ಇದೆ. ಅದರ ಪ್ರಕಾರ 'ಕ್ಷಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ತ್ರಯೋದಶಿ ಶುಕ್ರವಾರ ಅಶ್ವಿನಿ ನಕ್ಷತ್ರ ಹನುಮಂತದೇವರ ವ್ರತ ಸಂಗಮ ಕಾಲವು' ಎಂದರೆ ಕ್ರಿ.ಶ. ೧೭೪೬ ರಲ್ಲಿ ಗೋಪಾಲದಾಸರಿಗೆ ಅಂಕಿತ ಪ್ರದಾನವಾಯಿತೆಂದು ತಿಳಿಯಬಹುದು.

ಗೋಪಾಲದಾಸರಿಗೆ ಶಿಷ್ಯ ವೃಂದವೊಂದಿತ್ತು. ಶ್ರೀನಿವಾಸಾ ಚಾರ್ಯರೆಂಬ ಮಹಾನ್ ಪಂಡಿತರು ಗೋಪಾಲದಾಸರ ಸೂಚನೆ ಯಂತೆ ಪಂಢರಾಪುರಕ್ಕೆ ಹೋಗಿ ಭೀಮರಥಿಯಲ್ಲಿ ಸ್ನಾನಮಾಡಿ 'ಜಗನ್ನಾಥ ವಿಠಲ' ಅಂಕಿತವನ್ನು ಪಡೆದು ಜಗನ್ನಾಥದಾಸರೆಂಬ ಹೆಸರನ್ನು ಪಡೆದರು. ಗೋಪಾಲದಾಸರ ಮೂವರು ತಮ್ಮಂದಿರು ಅಣ್ಣನಿಂದಲೇ ಅಂಕಿತ ಪಡೆದರು. ಸೀನಪ್ಪ ಮತ್ತು ದಾಸಪ್ಪ ಎಂಬ ತಮ್ಮಂದಿರು ಅಣ್ಣಂದಿರಂತೆಯೇ ಅಪರೋಕ್ಷಜ್ಞಾನಿಗಳಾದರು.

ವಿಜಯದಾಸರ ಸ್ಫೂರ್ತಿಯಿಂದ ಕೀರ್ತನೆಗಳ ರಚನೆಗೆ ತೊಡಗಿ ನೂರಾರು ಕೀರ್ತನೆಗಳನ್ನು ಹರಿದಾಸ ಸಾಹಿತ್ಯಕ್ಕೆ ನೀಡಿದ ಗೋಪಾಲದಾಸರು ಚಿತ್ರಭಾನು ಸಂವತ್ಸರದ ಪುಷ್ಯ ಕೃಷ್ಣಾಷ್ಟಮಿ ಯಂದು (ಕ್ರಿ.ಶ. ೧೭೬೩) ಉತ್ತನೂರಿನಲ್ಲಿ ನಿಧನರಾದರು.

ಗೋಪಾಲದಾಸರು ಕೀರ್ತನೆ, ಉಗಾಭೋಗ ಮತ್ತು ಸುಳಾದಿ ಎಂಬ ಮೂರು ಪ್ರಕಾರಗಳಲ್ಲಿ ಕೃತಿರಚನೆ ಮಾಡಿದ್ದಾರೆ. ದೇವಾನು ದೇವತೆಗಳ ಸ್ತುತಿ, ತಾತ್ತ್ವಿಕ ವಿಚಾರಗಳು, ಪೌರಾಣಿಕ ವಿಚಾರಗಳು ಇವರ ರಚನೆಗಳಲ್ಲಿವೆ.

ಗೋಪಾಲದಾಸರ ಸ್ತುತಿಪದಗಳು ಕೇವಲ ಸ್ತುತಿಪದಗಳಾಗಿರದೆ ತಾತ್ತ್ವಿಕ ವಿಚಾರಗಳನ್ನೂ ಪ್ರತಿಪಾದಿಸುತ್ತವೆ. ಸ್ಥಿರಭಕ್ತಿಯ ದೃಢ ಪ್ರತಿಪಾದನೆಯನ್ನು,

**ದುರಿತ ಬಂದರಾಗಲಿ ಹರುಷ ಬಂದರಾಗಲಿ**
**ಇರುಳು ಹಗಲು ನಿನ್ನ ಸ್ಥಿರಭಕುತಿ ಸ್ಮರಣೆಯಿತ್ತು**
**ಪೊರೆ ಎನ್ನ ಬಿಡದಂತೆ ಗೋಪಾಲವಿಠಲ**

ಎಂಬ ಕೀರ್ತನೆಯಲ್ಲಿ ನೋಡಬಹುದು. 'ನೀನೇ ಎನಗೆ ದಿಕ್ಕು' ಎಂದು ಸಂಪೂರ್ಣ ದಾಸನಾದಾಗ ಭಕ್ತನ ಯೋಗಕ್ಷೇಮವನ್ನು ಭಗವಂತ ನೋಡಿಕೊಳ್ಳುತ್ತಾನೆಂಬುದು ದಾಸರ ನಂಬಿಕೆ.

**ಅನ್ಯ ದೈವವರಿಯದೆ ಅನ್ಯಕ್ಕೆ ಎರಗದೆ**
**ತನ್ನನೆ ನೆರೆನಂಬಿ ಚಿಂತಿಪರ**

**ತನ್ನವನೆಂತೆಂದು ತನ್ನ ತಿಳಿಸಿಕೊಟ್ಟು**
**ಘನ್ನ ಪದವಿಗೇರಿಸಿನ್ನು ತಾ ಸಲಹುವ**
**ನಿನ್ನ ದಾಸರ ದ್ವಾರವನ್ನು ಕಾಯ್ವರ ಮನೆ**
**ಕುನ್ನಿ ಎಂದೆನಿಸೆನ್ನ ಗೋಪಾಲವಿಠಲ**

ಎಂದು ಕೇಳಿಕೊಂಡು 'ದಾಸರ ದಾಸರ ಮನೆಯ ಕುನ್ನಿ' ಎನಿಸಿಕೊಳ್ಳಲು ಕೂಡ ಅವರು ಅಂಜುವುದಿಲ್ಲ.

ಶ್ರೀಹರಿಯ ಸರ್ವವ್ಯಾಪಕತ್ವವನ್ನು ಹೇಳುತ್ತಾ, ಅವನ ದಶಾವತಾರವನ್ನು ದಾಸರು ನಿಂದಾಸ್ತುತಿಯ ಮೂಲಕ ಹೀಗೆ ವರ್ಣಿಸುತ್ತಾರೆ:

**ಕಡುಗುವಷ್ಟು ನಾರುತ ಮಡುವಿನೊಳಗೆ ಸೇರು... *ಮತ್ಸ್ಯಾವತಾರ***
**ಬಿಡದೆ ಬೆಟ್ಟವ ಪೊತ್ತು ಕಡಲೊಳಗಿರು ನೀನು... *ಕೂರ್ಮಾವತಾರ***
**ಅಡವಿ ಸೂಕರಜನ್ಮ ಬಿಡದೆ ಬರಲಿ ನಿನಗೆ... *ವರಾಹಾವತಾರ***
**ಕೆಡಲಿ ನಿನ್ನ ರೂಪ ಕಡುಘೋರನಾಗೆಲೊ ...*ನರಸಿಂಹಾವತಾರ***
**ಒಡಲಿಗಿಲ್ಲದೆ ನೀನು ತಿರುಪೆಯನು ಬೇಡೋ... *ವಾಮನಾವತಾರ***
**ಕೊಡಲಿಯ ಪಿಡಿದು ನೀನಡವಿ ಸಂಚಾರನಾಗು.. *ಭಾರ್ಗವಾವತಾರ***
**ಮಡದಿಯ ಕಳಕೊಂಡು ಜಡೆಯ ಧರಿಸೊ ನೀನು... *ರಾಮಾವತಾರ***
**ತುಡುಗ ದನಗಾವನೆಂದು ನುಡಿಯಲಿ ಜನರೆಲ್ಲ... *ಕೃಷ್ಣಾವತಾರ***
**ಉಡುವಸ್ತ್ರವಿಲ್ಲದೆ ಬತ್ತಲಾಗಿ ನಿಲ್ಲೊ... *ಬೌದ್ಧಾವತಾರ***
**ಕಡುವೇಗದಲಿ ನೀನು ಕಲ್ಕಿರೂಪನಾಗೊ.. *ಕಲ್ಕ್ಯವತಾರ***

ಇಲ್ಲಿ ಮೇಲುನೋಟಕ್ಕೆ ಶ್ರೀಹರಿಯನ್ನು ದಾಸರು ನಿಂದಿಸಿದಂತೆ ಕಂಡರೂ ಅ ಮೂಲಕ ಹರಿಯ ದಶಾವತಾರಗಳನ್ನು ಮೇಲಿನ ಕೀರ್ತನೆಯ ಒಂದೊಂದೇ ನುಡಿಯಲ್ಲಿ ಸೊಗಸಾಗಿ ನಿರೂಪಿಸಿರುವುದನ್ನು ಕಾಣಬಹುದು. ದಾಸರು ದಶಾವತಾರವನ್ನು ಹೇಳುವುದರ ಜೊತೆಜೊತೆಯಲ್ಲೇ ತಮ್ಮನ್ನು ಕಾಪಾಡಬೇಕೆಂದೂ, ಹಾಗೆ ಕಾಪಾಡಲು ಸಾಧ್ಯವಿಲ್ಲದಿದ್ದರೆ ಭಕ್ತವತ್ಸಲನೆಂಬ ನಿನ್ನ ಬಿರುದನ್ನು ಬಿಟ್ಟುಬಿಡಬೇಕೆಂದೂ ಭಗವಂತನನ್ನೇ ಆಗ್ರಹಿಸಿದ್ದಾರೆ.

**'ನಾಳೆ ಬರುವೆನೆಂದು ಹೇಳಿ ಮಧುರೆಗೆ ಪೋದ ಬಹಳ ದಿನವಾಯಿತಲ್ಲೊ ಉದ್ಧವ'** ಎಂಬ ಕೀರ್ತನೆಯಲ್ಲಿ ದಾಸರು ಗೋಪಿಯರೊಡನೆ ತಾವೂ ಒಬ್ಬರಾಗಿ ತಮ್ಮ ಅಸಹಾಯಕತೆ, ದೌರ್ಬಲ್ಯ ಹಾಗೂ ವಿರಹಯಾತನೆಗಳನ್ನು ತೋಡಿಕೊಳ್ಳುತ್ತಾ ಕೃಷ್ಣನ ಗುಣಗಳನ್ನು ವರ್ಣಿಸಿದ್ದಾರೆ.

**ಹೊಕ್ಕ ಭರದಿ ದೇವಕಿ ಸುತನ ಸಿಕ್ಕಿಸಿಕೊಂಡು ಬಾಲಕೆ ಬಿಗಿಯಲು**
**ಲೆಕ್ಕಿಸದಲೆ ಕಾಲಿಕ್ಕಿ ಹಣೆಯಲ್ಲಿ ಫಕ್ಕನೆ ತುಳಿದನಕ್ಕರದಿ ತಕ್ಕತಥೈಯ**
**ಧಿಮಿಧಿಮಿಕೆಂದು ಕುಣಿಯೆ ಸೊಕ್ಕು ಉಡುಗಲು ಫಕ್ಕನೆ ಕಾಳಿಂಗ**
**ದಿಕ್ಕುಗಾಣದೆ ಪ್ರಾಣಕ್ಕೆ ಬಂದಿತೆಂದು ಕಕ್ಕಸದಿಂದುಸುರಿಕ್ಕುತಿರೆ**

ಹೀಗೆ ಕಾಳಿಂಗವನ್ನು ಮರ್ದಿಸಿ ಇಂದಿರಾಪತಿಯು ಆನಂದದಿಂದಾಡುವ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

**ಆತ್ಮನಿವೇದನೆ** ಹಾಗೂ **ಆತ್ಮಶೋಧನೆ** ಭಕ್ತಿಮಾರ್ಗದ ಸಾಧಕರಲ್ಲಿ ಸಾಮಾನ್ಯವಾಗಿ ಕಂಡುಬರುವ ಗುಣಗಳು. ಭಕ್ತನ ಮನಸ್ಸಿನ ತೊಳಲಾಟದ ಒಂದು ಭಾಗವಾಗಿ ಆತ್ಮಶೋಧನೆ ಗೋಪಾಲದಾಸರ ಅನೇಕ ಕೀರ್ತನೆಗಳಲ್ಲಿ ಅಭಿವ್ಯಕ್ತವಾಗಿದೆ. **"ಭ್ರಾಂತಿ ಬಿಡದೊ ಭಾಗ್ಯ ಪುರುಷನೆ ವಿಷಯಂಗಳೆ ಜರಿದು ಶಾಂತಚಿತ್ತನಾಗೋ ತನಕ"** ಎಂದು ವಿಷಯ ಲಾಲಸೆಯನ್ನು ಜರಿದು ಶಾಂತಚಿತ್ತನಾದ ಮೇಲೆಯೇ ಮನದ ಭ್ರಾಂತಿ ಬಿಡಲು ಸಾಧ್ಯ ಎಂದಿದ್ದಾರೆ.

ಅಪರೋಕ್ಷಾನುಭವವನ್ನು ಪಡೆಯುವತನಕ ಭಕ್ತನ ಮನಸ್ಸಿನಲ್ಲಿ ಉಂಟಾಗುವ ಸಂಘರ್ಷ, ಶೋಧನೆ ಅವರ ಅನೇಕ ಕೀರ್ತನೆಗಳಿಗೆ ವಸ್ತುವಾಗಿರುತ್ತದೆ.

ಭಗವಂತನೇ ವೈದ್ಯನಾಗಿ ತನ್ನ ಭವರೋಗವನ್ನು ಕಳೆಯಬೇಕೆಂದು ಭಕ್ತ ಹೀಗೆ ಪ್ರಾರ್ಥಿಸುತ್ತಾನೆ:

**ಅನಾಥ ಬಂಧು ಗೋಪಾಲ ವಿಠಲರೇಯ**
**ಎನ್ನ ಭಾಗದ ವೈದ್ಯ ನೀನೆಯಾದೆ**
**ಅನಾದಿ ಕಾಲದ ಭವರೋಗ ಕಳೆಯಯ್ಯ**
**ನಾನೆಂದಿಗೂ ಮರೆಯೆ ನೀ ಮಾಡಿದುಪಕಾರ**

ಭಕ್ತನಾದವನಿಗೆ ಸಾಧನೆ ಬೇಕು. ಸಾಧನೆಯಿಲ್ಲದೆ ಮುಕ್ತಿ ದೊರೆಯುವುದಿಲ್ಲ. **"ಎಂದಿಗೆ ನಿನ್ನ ಚಿತ್ತಕೆ ಬರುವುದೊ ಸ್ವಾಮಿ ಅಂದೆ ಉದ್ಧರಿಸಯ್ಯ ಕರುಣಿಯೆ"** ಎನ್ನುವಾಗ ಭಗವಂತನ ಪ್ರಾರ್ಥನೆಯಲ್ಲಿ ಜೀವನದ ಬಹುಕಾಲವನ್ನು ಕಳೆಯಬೇಕೆಂಬ ಭಕ್ತನ ಆಶಯ ಧ್ವನಿಪೂರ್ಣವಾಗಿ ವ್ಯಕ್ತವಾಗುತ್ತದೆ. ಹರಿದಾಸರಲ್ಲಿ ಪ್ರಮುಖವಾಗಿ ಗುರುತಿಸಬೇಕಾದ ಅಂಶಗಳಲ್ಲಿ 'ದಾಸೋಽಹಂ' ಭಾವವೂ ಒಂದು. ಎಲ್ಲ ಚಿಂತೆಯನ್ನು ಬಿಟ್ಟು ಹರಿಯಲ್ಲಿ ಏಕಾಗ್ರಚಿತ್ತನಾಗಿ **'ನೀನಲ್ಲದೆ ಬೇರೊಬ್ಬರಿಲ್ಲ'** ಎನ್ನುವ ಅಭಿಪ್ರಾಯ ವ್ಯಕ್ತ ಮಾಡುವವರೇ ನಿಜವಾದ ಹರಿದಾಸರು.

**ನಿನ್ನ ಚಿತ್ತ ಎನ್ನ ಭಾಗ್ಯ ಇನ್ನೊಬ್ಬರೆನಗಿಲ್ಲ**
**ಮನ್ನಣೆ ಅಮನ್ನಣೆ ನಿನ್ನದೋ ಸರ್ವೇಶನೆ**
**ಬೆನ್ನು ಕೊಟ್ಟೆನೊ ನಿನಗೆ ಎನ್ನ ಏನನ್ನ ಮಾಡು**
**ಕಣ್ಣಲ್ಲಿ ಕಂಡಷ್ಟು ಎನ್ನ ಕೇಳೋಣ**
**ನಿನ್ನ ಬಣ್ಣಿಸಿ ನಾನು ಘನ್ನ ಬೇಡುವುದಿಲ್ಲ**
**ಎನ್ನದೆಂಬೊ ಅಹಂಕಾರವನ್ನು ಬಿಡಿಸೊ ದೇವ**

ಅಹಂಕಾರವರ್ಜನೆ ಸಾಧಕನ ಗುರಿ. ಇಲ್ಲದಿದ್ದರೆ ಭಗವಂತನನ್ನು ಒಲಿಸಿಕೊಳ್ಳುವುದು ಸಾಧ್ಯವಿಲ್ಲ. ಚಿತ್ತಚಾಂಚಲ್ಯ ಹಾಗೂ ವಿಷಯಾಸಕ್ತಿಯಲ್ಲಿ ಮುಳುಗಿ ಹೋಗಿರುವ ತಮ್ಮ ಮನಸ್ಸನ್ನು ಬಲವಂತದಿಂದ ಶ್ರೀಹರಿಯೆಡೆಗೆ ಹೊರಳಿಸುವ ನಿರಂತರ ಪ್ರಯತ್ನ ಗೋಪಾಲದಾಸರದು.

**ಕಚ್ಚಲೆನಗೆ ಕಾಮಕ್ರೋಧಗಳೆಂಬ ಕುನ್ನಿಗಳು**
**ಕಚ್ಚಿತೈ ಮೋಹಮದ ಮತ್ಸರವು**
**ಅಚ್ಚ ವಿಷಯಗಳೆಂಬೊ ಕಿಚ್ಚಿನೊಳಗೆ ಕೆಡಹಿ**
**ಹುಚ್ಚುಗೊಳಿಸುವದಯ್ಯ ಎಚ್ಚರಿಸದಲಿನ್ನು**

ಎಂದು ಪಶ್ಚಾತ್ತಾಪಪಟ್ಟಿದ್ದಾರೆ. ಭವದ ಜಂಜಾಟವು ಎಂಥದು, ಅದರಿಂದಾಗುವ ಹಿಂಸೆಯ ಪರಿಯನ್ನು **'ಒಗೆತನದೊಳು ಸುಖವಿಲ್ಲ'** ಎಂಬ ಕೀರ್ತನೆಯಲ್ಲಿ ಸೊಗಸಾಗಿ ಹೀಗೆ ನಿರೂಪಿಸಿದ್ದಾರೆ:

**ಮೂರು ಬಣ್ಣಿಗೆಯ ಮನೆಗೆ ಮೂರೆರಡು ಭೂತಗಳು**
**ಮೂರುನಾಲ್ಕು ಪ್ರಾಕಾರಕ್ಕೆ ಮೂರಾರು ಛಿದ್ರಗಳು**
**ಮೂರು ಅವಸ್ಥೆಯು ದಿನಕೆ ಮೂರು ನೂರಾರು ಹತ್ತರಲ್ಲಿ**
**ಮೂರು ವಿಧದ ಅನ್ನದಿಂದ ಮೂರು ತಾಪಕ್ಕಾರೆ**

ತಾಪತ್ರಯಗಳಿಂದ ಕೂಡಿದ ನವದ್ವಾರಯುಕ್ತವಾದ ಮಾನವ ಶರೀರಕ್ಕೆ ಮುತ್ತುವ ಅರಿಷಡ್ವರ್ಗಗಳು, ಅಷ್ಟಮದಗಳು, ಸಪ್ತವ್ಯಸನ ಗಳು, ಬಾಲ್ಯ ಯೌವನಾದಿ ಅವಸ್ಥೆಗಳು, ಅವುಗಳಿಂದಾಗುವ ಹಿಂಸೆ, ನೋವು, ನಷ್ಟಗಳೆಲ್ಲವನ್ನೂ ವಿವರವಾಗಿ ಹೇಳಿ ಕೊನೆಗೆ, ಸಾವು ಸಮೀಪಿಸಿದಾಗ ನಂಟರು ಯಾರೂ ಸಹಾಯಕ್ಕೆ ಬರುವುದಿಲ್ಲ; ನೀನೂ ಕೈಬಿಟ್ಟರೆ **'ಮತ್ಯಾರು ಗತಿ ಪೇಳೋ'** ಎಂದು ಶ್ರೀಹರಿಯನ್ನು ಮೊರೆಹೊಕ್ಕಿದ್ದಾರೆ.

ಪಂಚೇಂದ್ರಿಯಗಳು ಕೇವಲ ವಿಷಯಾಭಿಮುಖವಾಗಿರು ವುದನ್ನು ಹೇಳುತ್ತಾ, ಅವು ಹರಿಯ ವಿಷಯಕ್ಕೆ ಪ್ರೇರಿತವಾಗದಿದ್ದಾಗ, ಅದರಿಂದ ಪಾರಾಗಲು ಶ್ರೀಹರಿಯನ್ನು ಮರೆತದ್ದೇ ಕಾರಣ ಎಂದು ಮನವರಿಕೆಯಾಗಿದೆ ದಾಸರಿಗೆ.

**ಒಂದಪರಾಧವೆಂದು ವಂದಿಸಲೇನಯ್ಯ**
**ಒಂದರ ಚಿಂತೆಯೆಂದು ಪೊಂದಿಸಲೇನಯ್ಯ**
**ಒಂದರ ಭಯವೆಂದು ಬೇಡಿಕೊಳ್ಳಲೇನಯ್ಯ**
**...ಒಂದಲ್ಲ ಎರಡಲ್ಲ ವಿವರಿಸಿ ಹೇಳಲಿನ್ನು**
**ಒಂದಪರಾಧವೆ ಇವಕೆ ಕಾರಣಮೂಲ**
**ಇಂದಿರೆ ಅರಸ ಗೋಪಾಲವಿಠಲ ಕೃಷ್ಣ**
**ತಂದೆ ನಿಮ್ಮ ವಿಸ್ಮೃತಿ ಎನಗೆ ಮುಖ್ಯಾಪರಾಧ**

ಇಂಥ ಅಪರಾಧದಿಂದ ಪಾರಾಗಲು **'ನಿನ್ನ ಸ್ಮೃತಿಯೆ ವಿಧಿ'** ಎಂಬ ಗುರಿಯನ್ನಿಟ್ಟುಕೊಂಡು ಗೋಪಾಲವಿಠಲನನ್ನು ದಾಸರು ಪ್ರಾರ್ಥಿಸಿದ್ದಾರೆ.

ದ್ವೈತಮತದ ಸಿದ್ಧಾಂತಗಳನ್ನು ಹರಿದಾಸರು ನಾನಾ ಬಗೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಗೋಪಾಲದಾಸರೂ ತಮ್ಮ ಅನೇಕ ಕೃತಿಗಳಲ್ಲಿ ಶ್ರೀಹರಿ ಸರ್ವಕ್ಕೂ ಸ್ವರೂಪಭೂತನಾದವನು, ಸರ್ವ ವ್ಯಾಪಿ, ಸರ್ವಜ್ಞ, ಅನಂತಾವತಾರಿ, ಬಿಂಬರೂಪಿ ಎಂಬ ವಿಚಾರ ಗಳನ್ನು ವಿವರಿಸಿದ್ದಾರೆ.

**ಹರಿಯೆ ಸರ್ವೋತ್ತಮ ಹರಿಯೆ ಮೂಲದೈವ**
**ಹರಿ ಕ್ಷರಾಕ್ಷರದಿಂದ ವಿದೂರ ದೂರ**
**ಹರಿ ಜಗದ್ವ್ಯಾಪಕ ಸಕಲರಿಂದಲ್ಲಿ ಭಿನ್ನ**
**ಹರಿ ಮೂಲರೂಪ ಅವತಾರ ಅತ್ಯಂತ ಐಕ್ಯ**
**ಹರಿ ಚಿದಾನಂದ ಚಿನುಮಯ ಚಿದ್ರೂಪ**

ಮಧ್ವಮತ ತತ್ತ್ವಗಳ ತಿಳಿವಳಿಕೆ ನೀಡಿ ಕಾಪಾಡಬೇಕೆಂದು ಹರಿಯನ್ನು ಪ್ರಾರ್ಥಿಸುತ್ತಲೇ ಜೀವನ ಪಾರತಂತ್ರ್ಯವನ್ನೂ, ದೇವನ ಸ್ವಾತಂತ್ರ್ಯವನ್ನೂ ತಿಳಿಸುತ್ತಾರೆ. **'ಜೀವ ಅಸ್ವತಂತ್ರ, ದೇವ ನಿಜ; ಸ್ವತಂತ್ರ ಜೀವ, ಜಡರು ದೇವರಾಧೀನ'** ಎಂದಿದ್ದಾರೆ. ಶ್ರೀಹರಿಯು ಬಿಂಬ, ಜೀವ ಪ್ರತಿಬಿಂಬ; ಶ್ರೀಹರಿ ಆಡಿಸಿದಂತೆ ಜೀವ ಆಡುವನು ಎಂದು ಹೇಳಿ ಬಿಂಬ, ಪ್ರತಿಬಿಂಬಗಳ ತಾರತಮ್ಯವನ್ನು ನಿರೂಪಿಸಿ ದ್ದಾರೆ. **'ತಾರತಮ್ಯ ಪಂಚಭೇದ ಸತ್ಯವೆಂದು ಮಾರುತಮತ ಪೊಂದಿದವರನು ಪೊರೆಯೆಂದು'** ಎನ್ನುತ್ತ, ಮಧ್ವಸಿದ್ಧಾಂತದ ಮುಖ್ಯ ಪ್ರಮೇಯಗಳಲ್ಲಿ ಒಂದಾದ ತಾರತಮ್ಯ ವಿಚಾರವನ್ನೂ, ಜಗತ್ತಿನಲ್ಲಿಯ ಭೇದತತ್ತ್ವ ವಿಚಾರವನ್ನೂ ಸೂತ್ರಪ್ರಾಯವಾಗಿ ತಿಳಿಸಿದ್ದಾರೆ.

**ಒಂದು ಮೂರುತಿ ಒಂದೆರಡು ಮೂರುತಿ**
**ಪೊಂದಿ ಲಿಂಗದೇಹ ಇಪ್ಪ ಮೂರುತಿ**
**ಒಂದು ಮೂರು ಮೂರ್ತಿ ಅನಿರುದ್ಧ ಕಾಯ**
**ದಿಂದ ಒಳಹೊರಗೆ ವ್ಯಾಪ್ತವಾದ ಮೂರ್ತಿ**
**ವಂದಿಸಿದರೆ ಎಲ್ಲ ಒಂದೆ ಮೂರ್ತಿ ಕಾಣೋ**

ಪರಮಾತ್ಮ ನಾನಾ ರೂಪದಿಂದ ನಾನಾ ಸ್ಥಳಗಳಲ್ಲಿದ್ದರೂ ಮೂಲತಃ ಅವನದು ಒಂದೇ ರೂಪ ಎಂದಿದ್ದಾರೆ. ಹೀಗೆ **'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್'** – ಈ ಜಗತ್ತಿನಲ್ಲಿ ಇರುವುದೆಲ್ಲವನ್ನೂ ಭಗವಂತನಿಂದ ಮುಚ್ಚಿಬಿಡಬೇಕು ಎಂಬ ಈಶಾವಾಸ್ಯ ಉಪನಿಷತ್ತಿನ ಭಾವವನ್ನು ಈ ಪದ್ಯದಲ್ಲಿ ತೆರೆದಿಟ್ಟಿದ್ದಾರೆ:

**ಅಣು ಪರಮ ಅಣು ಅತ್ಯಣು ಬಲು ಅಣು**
**ಘನ ಘನ ಘನರೂಪ ಘನತರ ಘನತಮ**
**ಅಣುರೂಪದ ದ್ರವ್ಯ ಮನಸ್ಸಿಗೆ ಒಂದನ್ನು**
**ಎಣಿಕೆ ಹಿಡಿದೆನೆನಲು ಮನಕೆ ನಿಲ್ಲುವುದಲ್ಲ**
**ಘನರೂಪದ ದ್ರವ್ಯ ಆಕಾರದೊಳಗಿನ್ನು**
**ಅಣುವಾಗಿ ತೋರುವುದು ಅವ್ಯಾಕೃತ ದ್ರವ್ಯ**

ಅಣುವಿನಲ್ಲೂ ಪರಮಾಣುವಿನಲ್ಲೂ ಘನದಲ್ಲಿಯೂ ದ್ರವ್ಯ ದಲ್ಲಿಯೂ ಎಲ್ಲದರಲ್ಲೂ ಹರಿ ಇರುವನೆಂಬ **'ಅಣೋರಣೀಯಾನ್ ಮಹತೋ ಮಹಿಯಾನ್'**– ಅಣುವಿಗಿಂತಲೂ ಅಣುವಾಗಿದ್ದಾನೆ, ಮಹತ್ತಿಗಿಂತಲೂ ಮಹತ್ತಾಗಿದ್ದಾನೆ ಎಂಬ ಉಪನಿಷತ್ತಿನ ಭಾವನೆಯೇ ಇಲ್ಲಿಯೂ ವ್ಯಕ್ತವಾಗಿದೆ.

ಭಗವಂತ ಸರ್ವತಂತ್ರ ಸ್ವತಂತ್ರ, ಜೀವಿಯಾದವನು ಪರಾಧೀನ. ಶ್ರೀಹರಿ ತನ್ನ ಭಕ್ತರಿಗೆ ಏನನ್ನು ಕೊಡುವುದಾದರೂ ಅದು ಪ್ರಾಣದೇವರ ಮುಖಾಂತರವೇ. ಹಾಗೆಯೇ ಭಕ್ತನೂ ತನ್ನ ಪೂಜಾದಿಗಳನ್ನು ಮುಖ್ಯಪ್ರಾಣಾಂತರ್ಗತನಾದ ಶ್ರೀಹರಿಗೇ ಸಲ್ಲಿಸಬೇಕು. 'ಗುರು' ಸ್ಥಾನವನ್ನು ಪಡೆದಿರುವ ಪ್ರಾಣದೇವರ ಸ್ತುತಿ ಹರಿದಾಸರಲ್ಲಿ ಒಂದು ಪರಂಪರೆಯಾಗಿ ಬಂದಿದೆ. ಅದರೊಂದಿಗೆ ಹನುಮ, ಭೀಮರನ್ನೂ ಸ್ತುತಿಸುವುದಿದೆ. ಹನುಮ, ಭೀಮ – ಈ ಎರಡೂ ಶ್ರೀಮನ್ಮಧ್ವಾಚಾರ್ಯರ ಮೊದಲಿನ ಎರಡು ಅವತಾರಗಳೆಂಬ ನಂಬಿಕೆ ಮಾಧ್ವರಲ್ಲಿದೆ. ಇದಕ್ಕೆ ಅನುಗುಣವಾಗಿ ಹನುಮ, ಭೀಮ, ಮಧ್ವರನ್ನು ಗೋಪಾಲದಾಸರೂ ಸ್ತುತಿಸಿದ್ದಾರೆ. **'ಇದು ಏನೊ ಚರಿತ ಯಂತ್ರೋದ್ಧಾರ'** ಎಂಬ ಕೀರ್ತನೆಯ **"ವಾರಿಧಿ ಗೋಷ್ಪಾದ ನೀರಂತೆ ದಾಟಿದ ಧೀರ ಯೋಗಾಸನ**

**ಧಾರಿಯಾಗಿಪ್ಪುದು" –** ಈ ನುಡಿಯಲ್ಲಿ ಹನುಮಂತ ಕಡಲನ್ನು ದಾಟಿದ ವಿಚಾರವಿದ್ದರೆ, **"ದುರುಳ ಕೌರವರನ್ನು ವರಗದೆಯಲಿ ಕೊಂದ ಕರದಲ್ಲಿ ಜಪಮಾಲೆ ಧರಿಸಿ ಎಣಿಸುವುದು"** ಎಂಬಲ್ಲಿ ಕೌರವರನ್ನು ಕೊಂದ ಭೀಮನ ಬಗೆಗೆ ಪ್ರಸ್ತಾಪ ಇದೆ. **"ಹೀನಮತಗಳನು ವಾಣಿಲಿ ತರಿದಂಥ ಜ್ಞಾನವಂತನೆ ಹೀಗೆ ಮೌನವ ಧರಿಸಿದ್ದು"** ಇಲ್ಲಿ ಮಧ್ವಾಚಾರ್ಯರಾಗಿ ಅವತರಿಸಿ ಇತರ ಮತಗಳನ್ನು ಅಲ್ಲಗಳೆದು ಮಧ್ವಮತವನ್ನು ಸ್ಥಾಪಿಸಿದ್ದನ್ನು ಹೇಳಿದ್ದಾರೆ.

ಹರಿಕೀರ್ತನೆ ಮಾಡುತ್ತಾ ತಾತ್ತ್ವಿಕ ವಿಚಾರಗಳನ್ನು ಹೇಳುತ್ತಲೇ ಗೋಪಾಲದಾಸರು ಅಲ್ಲಲ್ಲಿ ಸಾಮಾಜಿಕ ಕಳಕಳಿಯನ್ನೂ ವ್ಯಕ್ತಪಡಿಸಿದ್ದಾರೆ. ಡಂಭಾಚಾರಿಗಳನ್ನು ಕೆಲವು ಕಡೆ ಟೀಕಿಸಿದ್ದಾರೆ.

**ಕಾಡಿಗೆ ಮಸಿ ಕನ್ನಡಿಗೆ ಪೂಸಿ ಇನ್ನು**
**ನೋಡಲು ಮೊಗವನ್ನು ಪಾಡಾಗಿ ತೋರೋದೆ**
**ಗಾಡಿಕಾರನು ತನ್ನೊಡಲಾಸೆಗೆ**
**ನಾಡೊಳಗಿಲ್ಲದಾಟಾಡಿ ಜನಮರುಳು**
**ಮಾಡಿ ಧನವನ್ನು ಕೂಡಿಸಿದಂದದಿ**

ಇಂಥವೆಲ್ಲ **'ಮಾಡದೆ ಭಕುತಿಯ ಬೇಡದೆ ಮುಕುತಿಯ'** ಆಡುವವರ ವಿಧಾನಗಳು. ಆದರೆ ಚಿಂತನಶೀಲನಾದವನು **'ಬಾಡಿಗೆ ಮನೆ ದೇಹ ಬಿಡಾರ ಸ್ಥಿರವಲ್ಲ '** ಎಂದು ತಿಳಿಯುತ್ತಾನೆ.

**ಶೃಂಗಾರ ಗದ್ದಿಗೆ ಬಂಗಾರಾಭರಣವಿಟ್ಟು**
**ರಂಗ ಒಲಿಯೊ ಎಂದು ಅಂಗೀಕರಿಸಲರಿಯೆ**
**ಅಂಗದ ಕೊರಡು ಶ್ರೀಗಂಧ ತೇದಿಡುವೆನೊ**
**ಕಂಗಳೆರಡು ದೀಪ ಕರವುಭಯ ಚಾಮರ**
**ಅಂಗದೊಳಿದ್ದಷ್ಟಕಮಲವೆ ಕುಸುಮವು**
**ಹಿಂಗದೆನ್ನಯ ಕಿಂಚಿದ್ಭಕುತಿಯೆ ನೈವೇದ್ಯ**
**ರಂಗ ದಿನದಿನದಿ ಮಾಡಿಸಿದ ಕರ್ಮವೆ ಕಪ್ಪ**
**ತುಂಗವಿಕ್ರಮ ಜಠರಾಗ್ನಿಯೆ ಆರತಿ ತು**
**ರಂಗ ವದನ ಸರ್ವಾಂಗ ಸಮರ್ಪಿಸಿ ಕ**
**ರಂಗಳ ಮುಗಿವೆ ಎನ್ನಂತರಂಗದಿ ನಿಲ್ಲೊ**

ಪರಿಪರಿಯಾದ ಪರಿಕರಗಳಿಂದ ಹರಿಪೂಜೆ ಮಾಡಲಾಗದಿದ್ದಲ್ಲಿ ತಮ್ಮ ಮನಸ್ಸು ಶರೀರ ಹಾಗೂ ಇತರ ಅಂಗಾಂಗಗಳನ್ನೇ ಪರಿಕರಗಳನ್ನಾಗಿ ಮಾಡಿಕೊಂಡು ಸರಳವಾಗಿ ಭಗವಂತನನ್ನು ಪ್ರಾರ್ಥಿಸಿ ತಮ್ಮ ಅಂತರಂಗದಲ್ಲಿ ನಿಲ್ಲು ಎಂದು ಬೇಡಿಕೊಂಡಿದ್ದಾರೆ. ಈ ನುಡಿ ನೋಡಿದಾಗ ಬಸವಣ್ಣನವರ **'ಉಳ್ಳವರು ಶಿವಾಲಯವ ಮಾಡುವರು'** ಎಂಬ ವಚನ ನೆನಪಿಗೆ ಬರುತ್ತದೆ.

ಪಾಪವನ್ನು ವ್ಯಕ್ತಿಯಂತೆ ಭಾವಿಸಿ, ಪಾಪಪುರುಷನಿಗೆ **ಪೂಜೆ ಮಾಡುವ ವಿಶಿಷ್ಟ ಬಗೆಯನ್ನು ಗೋಪಾಲದಾಸರು ವಿವರಿಸಿದ್ದಾರೆ 'ಪೂಜೆಯನ್ನು ಮಾಡಿರೊ ಪಾಪಿ ಪುರುಷನಿಗೆ'** ಎಂಬ ಕೃತಿಯಲ್ಲಿ ದೇವರಿಗೆ ಮಾಡುವ ಪೂಜಾ ಸಾಮಗ್ರಿಗಳಿಗಿಂತ ತದ್ವಿರುದ್ಧವಾದ ಪರಿಕರಗಳನ್ನು ಹೇಳಿದ್ದಾರೆ:

**ಕಾಯ–ಮಲ–ತೋಯದ ಸ್ನಾನವನೆ ಮಾಡಿಸಿ**
**ಬಾಯ ಮುಕ್ಕುಳಿಸಿದಾಚಮನ ಎನಿಸಿ**
**ಹೇಯ ಮೈಲಿಗೆ ವಸನ ವಸ್ತ್ರಗಳನೆ ಕೊಟ್ಟು**
**ಕಾಯ ಕಳಚಿದ ರೋಮ ನಖಗಳ ಅಲಂಕರಿಸಿ**

ಇದರಿಂದ ಪಾಪಿಯಾದವನು ಎಷ್ಟು ನಿಕೃಷ್ಟನಾದವನು ಎಂಬುದು ವಿದಿತವಾಗುತ್ತದೆ.

ಗೋಪಾಲದಾಸರ ಅನುಭವದ ವಾಣಿಗಳು ಕೆಲವು ಉಪದೇಶಪರವಾದ ಅಭಿವ್ಯಕ್ತಿಯಾಗಿಯೂ ಹೊರಹೊಮ್ಮಿವೆ. **'ನಂಬಿ ನೀ ಕೆಡದಿರು ಇಹಲೋಕ ಸುಖವೆಂಬ ಕಂಬಳಿಯೊಳಬುತಿ' ' ಮನುಜ ಜನ್ಮ ಮಹಾಸುಕೃತದ ಫಲ'** ಎಂದು ಹೇಳಿ ಇಂಥ ಜನ್ಮವನ್ನು ಶ್ರೀಹರಿಯ ಕೀರ್ತನೆಯಲ್ಲಿ, ಗುರು ಉಪದೇಶ ಪಡೆಯುವಲ್ಲಿ, ಭಕ್ತಿಯ ಸಾಧನೆಯಲ್ಲಿ ಸಾರ್ಥಕಪಡಿಸಿಕೊಳ್ಳಬೇಕು ಎಂಬುದೇ ಅವರ ನಿಲುವು. ಹೀಗೆ ಗೋಪಾಲದಾಸರು ದಾಸಪರಂಪರೆಯ ನಕ್ಷತ್ರ ಪಂಕ್ತಿಯಲ್ಲಿ ಜ್ವಾಜ್ವಲ್ಯಮಾನವಾದ ತಾರೆಯಾಗಿ ಕಂಡುಬರುತ್ತಾರೆ.

## ಪುಸ್ತಕಪರಿಚಯ

## ಶ್ರೀರಾಮಕೃಷ್ಣ ವಚನಸುಧೆ

**ಅನುವಾದಕರು : ಶಾಂತಲಾ ರಾಮಚಂದ್ರ ಹೆಗಡೆ**

**ಪ್ರಕಾಶಕರು: ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಸ್ಥೆ; ಬನಶಂಕರಿ 1ನೇ ಘಟ್ಟ, ಬೆಂಗಳೂರು–560050 ; ಪುಟ : 148, ಬೆಲೆ : ರೂ. 50/–**

ಜಗತ್ತಿನ ಆಧ್ಯಾತ್ಮಿಕ ಸಾಹಿತ್ಯದ ಇತಿಹಾಸದಲ್ಲಿ 'ಮ' ಅವರ ಕಥಾಮೃತ (ದೇವಮಾನವ ಶ್ರೀರಾಮಕೃಷ್ಣ ಪರಮಹಂಸರ ಮಾತುಕತೆಗಳ ಸಂಗ್ರಹ; ಕನ್ನಡದಲ್ಲಿ 'ಶ್ರೀರಾಮಕೃಷ್ಣ ವಚನವೇದ') ಒಂದು ಅನನ್ಯ ಪ್ರಶಸ್ತ ಸ್ಥಾನಕ್ಕೆ ಭಾಜನವಾಗಿದೆ. ಅದೊಂದು ಅದ್ಭುತ ಅಮೃತ ಸಾಗರ; ಸಮಸ್ತ ವೇದೋಪನಿಷತ್ತು ಗೀತೆ ಇತ್ಯಾದಿಗಳ ಸಾರ. ಸಾಧಕರಿಗೆಂತೋ ಅಂತೆ ಸಂಸಾರಿಗಳಿಗೂ ಅದು ಬೆಳಕಿನ ಹೊಳೆ!

'ಶ್ರೀರಾಮಕೃಷ್ಣ ವಚನಸುಧೆ' ಕೃತಿ 'ಕಥಾಮೃತ' ದಿಂದ ಆಯ್ದ ಮಂತ್ರವತ್ತಾದ ಮತ್ತು ಸೂತ್ರವತ್ತಾದ ಸೂಕ್ತಿಗಳ ಸಂಚಯ. ಈ ಬಂಗಾಳಿ ಸೂಕ್ತಿಗಳನ್ನು ಸಂಗ್ರಹಿಸಿದವರು ಶ್ರೀ ಎನ್. ಕೃಷ್ಣಸ್ವಾಮಿ ಅವರು. ಕನ್ನಡ ಲಿಪಿಯಲ್ಲಿ ಬಂಗಾಳಿ ಮೂಲ ಮತ್ತು ಕನ್ನಡ ಅನುವಾದ ಎರಡೂ ಇಲ್ಲಿ ಲಭ್ಯ. ಹೀಗೆ ನೋಡಿದರೆ, ಬಂಗಾಳಿ ಮೂಲವೆ ಇಲ್ಲಿನ ಮುಖ್ಯ ವೈಶಿಷ್ಟ್ಯ. ಅನುವಾದವಿದ್ದರೆ ಸಾಕಲ್ಲವೆ, ಮೂಲದ ಅಗತ್ಯವಾದರೂ ಏನು ಎಂದು ಯಾರಾದರೂ ಕೇಳಬಹುದು. ಆದರೆ ಮೂಲಕ್ಕೆ ಅದರದೇ ಆದ ಮಾಂತ್ರಿಕತೆ ಮತ್ತು ಅಧಿಕೃತತೆ ಇರುತ್ತದೆ ಎಂಬುದನ್ನು ಮರೆಯಬಾರದು. ಎಷ್ಟೋ ಸಲ ಮೂಲದ ಪರಿಣಾಮ ಭಾಷಾಂತರದಲ್ಲಿ ಸಂಪೂರ್ಣವಾಗಿ ಮೂಡಿಬಂದಿರಬಹುದು. ಅಲ್ಲದೆ, ಕನ್ನಡಿಗರಿಗೆ ಇಲ್ಲಿ ಬಂಗಾಳಿಯ ಇಣುಕುನೋಟವೂ ಸಿಗುವುದೊಂದು ಅನುಕೂಲ! ಒಟ್ಟಿನಲ್ಲಿ, ಪುಟ್ಟದಾದರೂ ಅಪರೂಪದ ಪುಸ್ತಕ, 'ಶ್ರೀರಾಮಕೃಷ್ಣ ವಚನಸುಧೆ'. ಇದನ್ನು ಯಶಸ್ವಿಯಾಗಿ ನಿರ್ವಹಿಸಿ, ಕನ್ನಡಿಗರಿಗಿತ್ತು ಉಪಕರಿಸಿರುವ, ಶ್ರೀ ಎನ್. ಕೃಷ್ಣಸ್ವಾಮಿ ಮತ್ತು ಶ್ರೀಮತಿ ಶಾಂತಲಾ ರಾಮಚಂದ್ರ ಹೆಗಡೆಯವರು ಅಭಿನಂದನಾರ್ಹರು. ಆಸಕ್ತ ವಾಚಕರು ಇದರ ಪ್ರಯೋಜನ ಪಡೆದುಕೊಂಡು ಧನ್ಯರಾಗಲಿ! **– ಡಾ. ಸಿ.ಪಿ.ಕೆ.**